**Evidence on Issue No. 1**

ದಿನಾಂಕ 23.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ **2** ನೇ ಪಾರ್ಟಿ ಪರ ಶ್ರೀ ಬಿ.ಎಲ್.ಜಿ ವಕೀಲರಿಂದಃ

ನಾನು 2001 ರಲ್ಲಿ ನಿರ್ವಾಹಕಳಾಗಿ ಕೆಲಸಕ್ಕೆ ಸೇರಿಕೊಂಡಿದ್ದೆನು. ನಾನು ಕೆಲಸಕ್ಕೆ ನೇಮಕಗೊಂಡ ನಂತರ 2 ವರುಷಗಳ ಕಾಲ ನನಗೆ ತರಬೇತಿಯನ್ನು ನೀಡಿದರು. 2003 ರಲ್ಲಿ ನನ್ನನ್ನು ನನ್ನ ಕೆಲಸವನ್ನು ಖಾಯಂಗೊಳಿಸಿದರು. ದಿಃ 25.08.2016 ರಿಂದ ನಾನು 2 ನೇ ಪಕ್ಷಗಾರರ ನಿಮಗದಲ್ಲಿ ಕೆಲಸ ಮಾಡಿರಲಿಲ್ಲ ಎಂದರೆ ಸರಿ. 25.08.2016 ರಿಂದ ನಾನು ಕೆಲಸಕ್ಕೆ ಗೈರು ಹಾಜರಾದ ಮೇಲೆ ನನಗೆ ನಿಗಮದಿಂದ ನನಗೆ ಎರಡು ಕರೆ ಪತ್ರಗಳನ್ನು ಕೆಲಸಕ್ಕೆ ಹಾಜರಾಗಿ ಎಂದು ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ಆಗಲೂ ಸಹ ನಾನು ಕೆಲಸಕ್ಕೆ ಹಾಜರಾಗಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವೆರದು ನುಡಿಯುತ್ತಾರೆ ನನಗೆ ಮೇಲೆ ಹೇಳಿದ ಎರಡು ಕರೆ ಪತ್ರಗಳು ಬರುವ ಮೊದಲೇ ನಾನು ಅನಾರೋಗ್ಯವಿದ್ದ ಕಾರಣ ದಿಃ24.08.2016 ರಲ್ಲಿ, ನನ್ನ ರಜೆ ಚೀಟಿಯನ್ನು ವೈದ್ಯಕೀಯ ದಾಖಲಾತಿಯೊಂದಿಗೆ speed post ಮೂಲಕ ಕಳುಹಿಸಿಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಕರ ಪತ್ರಗಳು ಬಂದ ನಂತರ, ನಾನು ಮತ್ತೆ ರಜದ ಚೀಟಿಯನ್ನು ದಾಖಲಾತಿಗಳೊಂದಿಗೆ ಕಳುಹಿಸಲಿಲ್ಲ. ನನಗೆ ಕರ ಪತ್ರಗಳು ಬಂದ ನಂತರವೂ ನಾನು ಕರ್ತವ್ಯಕ್ಕೆ ಹಾಜರಾಗದೇ ಇದ್ದ ಕಾರಣ ನಿಗಮದವರು ನನಗೆ ದೋಷಾರೋಪಣಾ ಪತ್ರವನ್ನು ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ಸದರಿ ದೋಷಾರೋಪಣಾ ಪತ್ರ ಕ್ಕೆ ನಾನು ಪ್ರತ್ಯುತ್ತರವನ್ನು ಕೊಟ್ಟಿದ್ದೆನು. ನಾನು ಅನಧೀಕೃತವಾಗಿ ಕೆಲಸಕ್ಕೆ ಗೈರು ಹಾಜರಾಗಿದ್ದರಿಂದ ನನ್ನವಿರುದ್ದ ಇಲಾಖೆಯಿಂದ ಇಲಾಖಾ ವಿಚಾರಣೆ ನಡೆದಿತ್ತು ಎಂದರೆ ಸರಿ. ವಿಚಾರಣೆ ನಡೆಸಲು enquiry officer ನೇಮಕ ಮಾಡಿದ್ದರು ಎಂದರೆ ಸರಿ. enquiry officer ನೇಮಕ ಗೊಂಡ ನಂತರ enquiry officer ನನಗೆ ನೀವು ವಿಚಾರಣೆಗೆ ಹಾಜರಾಗಬೇಕು ಎಂದು ಸೂಚನಾ ಪತ್ರವನ್ನು ಕಳುಹಿಸಿದ್ದರು ಎಂದರೆ ಸರಿ.

ದಿಃ 03.01.2017 ರಂದು ನಾನು enquiry officer ಮುಂದೆ ನಾನು ಇಲಾಖಾ ವಿಚಾರಣೆಗೆ ಹಾಜರಾಗಿದ್ದೆನು ಎಂದರೆ ಸರಿ ಹಾಗೂ ಆ ದಿನ, ನನಗೆ ಆರೋಗ್ಯ ಸರಿಯಿಲ್ಲ ವಿಚಾರಣೆಯನ್ನು ಮುಂದೂಡಿ ಎಂದು enquiry officer ಗೆ ಮನವಿ ಮಾಡಿಕೊಂಡಿದ್ದೆ ಎಂದರೆ ಸರಿ. ಅದೇ ರೀತಿ ನಾನು ದಿಃ 14.02.2017 ರಲ್ಲಿ enquiry officer ಮುಂದೆ ಹಾಜರಾಗಿ, ಮತ್ತೆ ನನಗೆ ಆರೋಗ್ಯ ಸರಿಯಿಲ್ಲ ವಿಚಾರಣೆ ಮುಂದೂಡಬೇಕು ಎಂದು ಮನವಿ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ್ವತಃ ನುಡಿಯುತ್ತಾರೆ, ನಾನು enquiry officer ಮುಂದೆ

ಯಾವುದೇ ವಿಚಾರಣೆಗೆ ಹಾಜರಾಗಿರಲಿಲ್ಲ ಎಂದು. ನಾನು ಅನಾರೋಗ್ಯ ಇದ್ದ ಕಾರಣ, ಇಲಾಖಾ ವಿಚಾರಣೆಗೆ ಯಾವತ್ತೂ enquiry officer ಮುಂದೆ ಹಾಜರಾಗಿರಲಿಲ್ಲ.

ದಿಃ 25.05.2017 ರಂದು ನಾನು ಇಲಾಖಾ ವಿಚಾರಣೆಗೆ ಹಾಜರಾಗಿ, ವಿಚಾರಣೆಗೆ ಹಾಜರಾಗಿರುವುದಕ್ಕೆ ಹಾಜರಾತಿಯ ಸಹಿಯನ್ನು ಮಾಡಲು ತಿರಸ್ಕರಿಸಿದೆನು ಹಾಗೂ ವಿಚಾರಣೆಯಲ್ಲಿ ಭಾಗವಹಿಸಲು ಸಹ ತಿರಸ್ಕಾರ ಮಾಡಿದೆನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನುಡಿಯುತ್ತರೆ ಆ ದಿವಸ ನಾನು ವಿಚಾರಣೆಗೆ ಹೋಗಿರಲಿಲ್ಲ ಎಂದು. ಆ ದಿನ ವಿಚಾರಣೆ ಇದ್ದ ವಿಷಯ ನನಗೆ ಗೊತ್ತಿತ್ತು, ನಾನು ಕಾಲಾವಕಾಶ ಕೊಡಿ ಎಂದು ಕೋರಿಕೊಂಡಿದ್ದೆನು.

ದಿಃ 21.03.2017 ರಂದು ಇಲಾಖಾ ವಿಚಾರಣೆಯಲ್ಲಿ ಇಲಾಖೆಯ ಪರವಾಗಿ ಸಾಕ್ಷಿಗಳು ಸಾಕ್ಷಿಯನ್ನು ನುಡಿದಿರುತ್ತಾರೆ ಇದು ನಿಮಗೆ ಗೊತ್ತಿದೆಯಾ ಎಂದರೆ ಗೊತ್ತಿಲ್ಲ. ದಿಃ 21.03.2017 ರಂದು ಇಲಾಖಾ ವಿಚಾರಣೆ ಇದ್ದಿದ್ದು ನನಗೆ ಗೊತ್ತಿತ್ತು. ದಿಃ 21.03.2017 ರಂದು ಸಾಕ್ಷಿಗಳ ವಿಚಾರಣೆಯಾದ ನಂತರ ನನ್ನಿಂದ ಸಾಕ್ಷಿಗಳ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೊಟ್ಟು ನೋಟಿಸನ್ನು ಕಳುಹಿಸಿಕೊಟ್ಟಿದ್ದರು ಎಂದರೆ ಸರಿ.

ಅದೇ ರೀತಿ ದಿಃ 04.05.2017 ರಂದು presenting officer ನವರು ಕೆಲವು ದಾಖಲೆಗಳನ್ನು ವಿಚಾರಣ ಅಧಿಕಾರಿಯವರ ಮುಂದೆ ಹಾಜರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ವಿಚಾರಣಾ ಅಧಿಕಾರಿಗಳಿಂದ ನಾನು ಎರಡು ನೋಟಿಸುಗಳನ್ನು ಪಡೆದುಕೊಂಡಿದ್ದೆನು. ಸದರಿ ನೋಟಿಸುಗಳು ಯಾವ ದಿನಾಂಕದ್ದು ಎಂದು ನೆನಪಿಲ್ಲ. ಇಲಾಖಾ ವಿಚಾರಣಾಧಿಕಾರಿ ಯವರು ಏನು ತೀರ್ಮಾನ ಕೊಟ್ಟಿದ್ದರು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ ಈಗಲಾದರೂ, ವಿಚಾರಣಾಧಿಕಾರಿಯವರು ಏನು findings ನ್ನು ಕೊಟ್ಟಿದ್ದರು ಎಂದು ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿಯು 2017 ರಲ್ಲಿ ನನಗೆ post ನಲ್ಲಿ dismiss order ನ್ನು ಕಳುಹಿಸಿಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ಆಗಲಾದರೂ ವಿಚಾರಣಾಧಿಕಾರಿಗಳು ನನಗೆ ಸಾಕಷ್ಟು ಕಾಲಾವಕಾಶವನ್ನು ವಿಚಾರಣೆ ಸಮಯದಲ್ಲಿ ಕೊಟ್ಟಿರುವುದಿಲ್ಲ ಎಂಬುದರ ಬಗ್ಗೆ ಮೇಲಾಧಿಕಾರಿಗಳಿಗೆ ಬರವಣಿಗೆ ಮುಖಾಂತರ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ತಿಳಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಮ್ಮ ಸಂಸ್ತೆಯ ಕೇಂದ್ರ ಕಚೇರಿಗೆ ಬರವಣಿಗೆ ಮೂಲಕ ನನಗೆ ಕಾಲಾವಕಾಶವನ್ನು ಕೊಡದೇ ನನ್ನ ರಜೆ ಚೀಟಿಯನ್ನು ವೈದ್ಯಕೀಯ ದಾಖಲೆಗಳೊಂದಿಗೆ ಸ್ವೀರಿಕಸಿಲ್ಲ ಎಂದು ತಿಳಿಸಿದ್ದೆನು. ನಾನೇ ಖುದ್ದಾಗಿ ಹೋಗಿ ಇದನ್ನು ಬರವಣಿಗೆಯಲ್ಲಿ ಕೊಟ್ಟಿದ್ದೆನು. ಈ ರೀತಿ ಕೊಟ್ಟಿರುವುದಕ್ಕೆ ನನ್ನ ಬಳಿ ದಾಖಲೆ ಇದ್ದು, ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.

2017 ನೇ ಇಸವಿಯ dismiss order ಅಲ್ಲದೇ ಇದೇ ತರಹ ಈ ಹಿಂದೆ 3-4 ಪ್ರಕರಣಗಳಲ್ಲಿ ಅನಧಿಕೃತವಾಗಿ ಗೈರು ಹಾಜರಾಗಿರುವ ಬಗ್ಗೆ ಪ್ರಕರಣ ದಾಖಲಾಗಿದ್ದವು ಎಂದರೆ ಸರಿ. ಸಾಕ್ಷಿಯು

ಮುಂದುವರೆದು ನುಡಿಯುತ್ತಾರೆ, ನಂತರ ಇಲಾಖೆಯವರು ಸಂಬಳ ರಹಿತ ರಜೆಯನ್ನು ನನಗೆ ಮಂಜೂರು ಮಾಡಿಕೊಟ್ಟಿದ್ದರು. ನನಗೆ ಅನಾರೋಗ್ಯ ಇತ್ತು, ಬದಲಿ ಕೆಲಸ ಬೇಕು ಎಂದು ಹೇಳಿದ್ದಕ್ಕೆ ಸಂಬಂಧಪಟ್ಟಂತೆ ಕೆಲವು ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿಪಿ 5 ರಲ್ಲಿ, ' ಸದರಿಯವರು ಯಾವುದೇ ಅಂಗನ್ಯೂನತೆ ಇಲ್ಲದಿರುವುದರಿಂದ ಅಂಗವಿಕಲ ಕಾಯ್ದೆ ವ್ಯಾಪ್ತಿಗೆ ಒಳಪಡುವುದಿಲ್ಲವೆಂದ ಮಾಹಿತಿಯನ್ನು ತಿಳಿಯಪಡಿಸುತ್ತಾ ಶೇಕಡಾವಾರು ಪ್ರಮಾಣವನ್ನು ತಿಳಿಸಲು ಸಾಧ್ಯವಿರುವುದಿಲ್ಲ' ಎಂದು ನಮೂದು ಇದೆ ಎಂದರೆ ಸರಿ. ನಾನು ಹೈ ಕೋರ್ಟಿನಲ್ಲಿ ರಿಟ್ ಪೆಟಿಷನ್ ನ್ನು ಹಾಕಿದ್ದೆನು ಎಂದರೆ ಸರಿ. ನಮ್ಮ ಇಲಾಖಾ ಸುತ್ತೋಲೆ ಪ್ರಕಾರ ಹಾಗೂ ಸದರಿ ರಿಟ್ ಆದೇಶದಲ್ಲಿ ಶೇ. 40 ರಷ್ಟು ಅಂಗನ್ಯೂನತೆ ಇದ್ದರೆ ಮಾತ್ರ ಬದಲಿ ಕೆಲಸ ಕೊಡಲು ಸಾಧ್ಯತೆ ಇದೆ ಎಂದರೆ ಸರಿ. ಆಗಾಗಿ ನನಗೆ ಶೇ. 40 ರಷ್ಟು ಅಂಗನ್ಯೂನತೆ ಇಲ್ಲದೇ ಇರುವುದರಿಂದ ಮಾನ್ಯ ಉಚ್ಚ ನ್ಯಾಯಾಲಯ, 40% physical disability ನನಗೆ ಇಲ್ಲದೇ ಇರುವುದರಿಂದ ನೀವು, ಕೆಲಸ ಮಾಡಲು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ನನ್ನ ರಿಟ್ ಅರ್ಜಿಯನ್ನು ವಜಾಗೊಳಿಸಿತು ಎಂದರೆ ಸರಿ. ಸದರಿ ಮಾನ್ಯ ಉಚ್ಚ ನ್ಯಾಯಾಯಲಯದ ಆದೇಶವನ್ನು ಮೇಲ್ಮನವಿ ಸಲ್ಲಿಸಿ ಪ್ರಶ್ನೆ ಮಾಡಿರುವುದಿಲ್ಲ. ಸದರಿ ಮಾನ್ಯ ಉಚ್ಚ ನ್ಯಾಯಾಯಲಯದ ಆದೇಶ ಬಂದ ನಂತರ, ನೀವು ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯ ಮಾಡಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇತ್ತು ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ನಾನು ಅನಾರೋಗ್ಯವಿದ್ದ ಕಾರಣ ಕೆಲಸಕ್ಕೆ ಹಾಜರಾಗಲಿಲ್ಲ ಎಂದು ನುಡಿಯುತ್ತಾರೆ.

ನಾನು ಕೆಲಸಕ್ಕೆ ಸೇರಿದಾಗಿನಿಂದಲೂ, ನಾನು ಯಾವುದೇ ರಜ ಅರ್ಜಿಯನ್ನು ಕೊಡದೇ, ಏಕಾಏಕಿ ಅನಧೀಕೃತವಾಗಿ ಗೈರು ಹಾಜರಾಗುವ ಪ್ರವೃತ್ತಿಯನ್ನು ಹೊಂದಿದ್ದೆನು ಎಂದರೆ ಸರಿಯಲ್ಲ. ಈ ಕೇಸು ಅಲ್ಲದೇ, ಈ ಹಿಂದೆ ನಾನು 3 ಸಲ ಕೆಲಸಕ್ಕೆ ಗೈರು ಹಾಜರು ಆಗಿದ್ದರೂ ಸಹ, ಮುಂದಿನ ದಿನಗಳಲ್ಲಿ ತಿದ್ದುಕೊಂಡು ಸರಿಯಾಗಿ ಕೆಲಸ ಮಾಡಲಿ ಎಂದು ನನಗೆ ಅವಕಾಶವನ್ನು ಕೊಟ್ಟಿದ್ದರೂ ಸಹ ದಿಃ 25.08.2016 ರಿಂದ ಕೆಲಸಕ್ಕೆ ಅನಧೀಕೃತವಾಗಿ ಗೈರು ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಇಲಾಖೆಯವರು ನನ್ನನ್ನು ಕೆಲಸದಿಂದ ವಜಾ ಗೊಳಿಸಿರುವುದು ನ್ಯಾಯಯುತವಾಗಿದೆ ಎಂದರೆ ಸರಿಯಲ್ಲ. ಇಲಾಖೆಯಿಂದ ನನ್ನನ್ನು ವಜಾ ಮಾಡಿದ ಆದೇಶದ ಮೇಲೆ ನಾನು ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಿದ್ದು ಅದೂ ಕೂಡ ವಜಾಗೊಂಡಿತ್ತು ಎಂದರೆ ಸರಿ. ಇಲಾಖಾ ವಿಚಾರಣೆ ಅಧಿಕಾರಿಗಳು ನನಗೆ ನೋಟಿಸು ಕೊಟ್ಟು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದರೂ ಸಹ, ನಾನು ಅದನ್ನು ಸದುಪಯೋಗ ಪಡೆದುಕೊಳ್ಳದೇ, ನ್ಯಾಯಾಲಯದಲ್ಲಿ ನನಗೆ ಸಾಕಷ್ಟು ಅವಕಾಶ ಕೊಟ್ಟಿರಲಿಲ್ಲ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದಕಾರಣ ವಿಚಾರಣಾಧಿಕಾರಿಯ ವಿಚಾರಣೆ ಕಾನೂನುಬದ್ಧವಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಏನೂ ಇಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.